ನಿಮ್ಮೊಡನೆ

# ನೊಂದ ಮನಸ್ಸುಗಳಿಗೆ ಮುಲಾಮು ಟ್ರೋಲರ್‌ಗಳಿಗೆ ಹಾಕಬೇಕಿದೆ ಲಗಾಮು

ನಟ ದರ್ಶನ್ ಕೊಲೆ ಪ್ರಕರಣವೊಂದರ ಎರಡನೇ ಆರೋಪಿ. ಜಾಮೀನಿನ ಮೇಲೆ ಇದ್ದಾರೆ. ಅವರ ಪರ–ವಿರೋಧದ ಸಂಗತಿಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಸಾಮಾಜಿಕ ಮಾಧ್ಯಮದ ವ್ಯಸನಕ್ಕೆ ಬಿದ್ದ ಕೆಲವು ಕೊಳಕು ಮನಸ್ಸುಗಳು ಅತಿರೇಕದಿಂದ ವರ್ತಿಸುತ್ತವೆ.

ಸಾಮಾಜಿಕ ಮಾಧ್ಯಮದಲ್ಲಿ ತಮ್ಮ ವಿರುದ್ಧ ಅಶ್ಲೀಲ ರೀತಿಯಲ್ಲಿ ಕಮೆಂಟ್‌ಗಳನ್ನು ಮಾಡಿದ ಕಾರಣಕ್ಕೆ ದರ್ಶನ್ ಅಭಿಮಾನಿಗಳ ವಿರುದ್ಧ ನಟಿ ರಮ್ಯಾ ದೂರು ನೀಡಿರುವುದು ಸ್ವಾಗತಾರ್ಹ ನಡೆ. ಸಾಮಾಜಿಕ ಮಾಧ್ಯಮಕ್ಕೆ ಜಗವೇ ಎಲ್ಲೆ. ಒಂದು ಕಡೆ, ಅದು ಅನೇಕ ಪ್ರತಿಭಾವಂತರಿಗೆ ವೇದಿಕೆ. ಇನ್ನೊಂದೆಡೆ, ಟ್ರೋಲ್ ಮಾಡುವ ವ್ಯಸನಕ್ಕೆ ಬಿದ್ದ ರೋಗಗ್ರಸ್ತ ಮನಸ್ಸುಗಳ ವಿಕೃತಿಯ ಅಭಿವ್ಯಕ್ತಿಗೆ ಭಿತ್ತಿ.

ಸಿನಿಮಾ ನಟರಿಗಾಗಿ ಅಭಿಮಾನಿ ಸಂಘಗಳನ್ನು ಕಟ್ಟಿಕೊಳ್ಳುತ್ತಾ ಬಂದಿರುವುದು ಕನ್ನಡದ ಸಂಸ್ಕೃತಿಯ ಭಾಗವೇ ಆಗಿದೆ. ಹಿಂದೆ ರಾಜ್‌ಕುಮಾರ್, ವಿಷ್ಣುವರ್ಧನ್, ಶಂಕರ್‌ನಾಗ್, ಅಂಬರೀಷ್ ಅಭಿಮಾನಿ ಸಂಘಗಳನ್ನು ಕಟ್ಟಿಕೊಂಡವರ ನಡುವೆ ಜಗಳಗಳು ಇರಲಿಲ್ಲ ಎಂದೇನೂ ಇಲ್ಲ. ಆದರೆ, ಅವರೆಲ್ಲರನ್ನೂ ಶಾಂತಗೊಳಿಸುವ, ಅವರಿಂದ ಒಳ್ಳೆಯ ಕೆಲಸಗಳನ್ನು ಮಾಡಲು ಪ್ರೇರಣೆ ನೀಡುವ ಆರೋಗ್ಯಕರ ಮನಸ್ಸುಗಳಿದ್ದವು. ಜಗಳಗಳು ಆಗೀಗ ನಡೆದರೂ ಅವನ್ನು ನಿಯಂತ್ರಿಸುವ ಪ್ರಯತ್ನಗಳನ್ನು ಸ್ವತಃ ರಾಜ್‌ಕುಮಾರ್, ವಿಷ್ಣುವರ್ಧನ್ ಅವರಂತಹವರೇ ಮಾಡುತ್ತಿದ್ದರು. ಅನ್ನದಾನ ಮಾಡುವುದು, ದಾನಿಗಳಿಂದ ರಕ್ತ ಸಂಗ್ರಹ ಮಾಡುವ ಅಭಿಯಾನಗಳನ್ನು ನಡೆಸುವುದು, ಬಡ ಮಕ್ಕಳ ಶಿಕ್ಷಣಕ್ಕೆ ಹಣಕಾಸು ನೆರವು ನೀಡುವುದು, ನಾಡಿನ ಅಸ್ಮಿತೆಯ ಪ್ರಶ್ನೆ ಬಂದಾಗ ಹೋರಾಟಕ್ಕೆ ಇಳಿಯುವುದು... ಈ ಎಲ್ಲವನ್ನೂ ಅಭಿಮಾನಿ ಸಂಘದವರು ಲಾಗಾಯ್ತಿನಿಂದ ಮಾಡಿಕೊಂಡು ಬಂದಿದ್ದಾರೆ. ಗೋಕಾಕ್ ಸೇರಿದಂತೆ ನಾಡಿನ ಪ್ರಮುಖ ಚಳವಳಿಗಳಲ್ಲಿ ಅಭಿಮಾನಿ ಸಂಘಗಳ ಹೆಜ್ಜೆಗುರುತು ಕಾಣಿಸುತ್ತದೆ. ಭೌತಿಕವಾಗಿ ಇದ್ದಂತಹ ಅಭಿಮಾನಿ ಸಂಘಗಳು ತಂತಮ್ಮ ನಡುವೆ ಉದ್ಭವಿಸುತ್ತಿದ್ದ ಭಿನ್ನಾಭಿಪ್ರಾಯಗಳನ್ನು ಎದಿರುಬದಿರಾಗಿಯೇ ಶಮನಗೊಳಿಸಿಕೊಳ್ಳುತ್ತಿದ್ದವು. ಈಗ ಜಾಲತಾಣದ ಮಾಯಾದಂಡ ಮೊಬೈಲ್ ಮೂಲಕ ಕೈಗೆ ಸಿಕ್ಕಿದೆ. ಅಭಿಮಾನಿ ಸಂಘಗಳ ಹೆಸರಿನಲ್ಲಿ ಸಾಮಾಜಿಕ ಮಾಧ್ಯಮದಲ್ಲಿ ಯಾರು ಬೇಕಾದರೂ ಖಾತೆಗಳನ್ನು ತೆರೆಯಬಹುದು. ನಟ ದರ್ಶನ್ ಅವರ ಹೆಸರಿನಲ್ಲಿಯಂತೂ ಹಲವಾರು ‘ಫ್ಯಾನ್ ಕ್ಲಬ್’ಗಳು ಸಾಮಾಜಿಕ ಮಾಧ್ಯಮದಲ್ಲಿ ಚಾಲ್ತಿಯಲ್ಲಿವೆ.

ಸದ್ಯಕ್ಕೆ ದರ್ಶನ್, ಕೊಲೆ ಪ್ರಕರಣವೊಂದರ ಎರಡನೇ ಆರೋಪಿ. ಅವರು ಜೈಲಿನಲ್ಲಿದ್ದು, ಆಮೇಲೆ ಜಾಮೀನಿನ ಮೇಲೆ ಹೊರಬಂದಿದ್ದಾರೆ. ಪ್ರಕರಣದ ವಿಚಾರಣೆ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ದರ್ಶನ್ ಕುರಿತು ಪರ–ವಿರೋಧದ ಸಂಗತಿಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡುವುದು ಸಹಜ. ಆದರೆ, ಸಾಮಾಜಿಕ ಮಾಧ್ಯಮದ ವ್ಯಸನಕ್ಕೆ ಬಿದ್ದ ಕೆಲವು ಕೊಳಕು ಮನಸ್ಸುಗಳು ಅತಿರೇಕವೂ ಬಾಲಿಶವೂ ಆದ ರೀತಿಯಲ್ಲಿ ವರ್ತಿಸುತ್ತವೆ. ವೃಥಾ ಸಮರ್ಥನೆಗೆ ಇಳಿಯುತ್ತವೆ. ಅದು ತಾರಕಕ್ಕೆ ಹೋದಾಗ ವಿಕೃತಿ ಮೆರೆಯುತ್ತವೆ.

‘ಸೋಷಿಯಲ್ ಮೀಡಿಯಾ ಟಾಕ್ಸಿಸಿಟಿ’ (ಸಾಮಾಜಿಕ ಮಾಧ್ಯಮದಲ್ಲಿ ವಿಷ ಕಾರುವಿಕೆ) ಎನ್ನುವುದು ಮನೋವೈದ್ಯರಿಗೆ ಈಗ ಅಧ್ಯಯನದ ಶಾಖೆಯೇ ಆಗಿದೆ. ನಕಾರಾತ್ಮಕವಾದ, ಹಾನಿಕಾರಕವಾದ, ದಾಳಿಕೋರ ಮನಃಸ್ಥಿತಿಯನ್ನು ಬಿಂಬಿಸುವ ಪೋಸ್ಟ್‌ಗಳನ್ನು ಇಂತಹ ವ್ಯಸನ ಅಂಟಿಸಿಕೊಂಡವರು ಹಾಕತೊಡಗುತ್ತಾರೆ. ಈಗ ನಟಿ ರಮ್ಯಾ ದೂರು ನೀಡಿರುವುದು ಅಂತಹ ಮನಸ್ಸುಗಳ ವಿರುದ್ಧದ ಹೋರಾಟಕ್ಕೆ ಮುನ್ನುಡಿಯಾದೀತು.

ನಟ–ನಟಿಯರನ್ನು ಗೇಲಿ ಮಾಡುವುದು, ವಿಮರ್ಶೆಗೆ ಒಡ್ಡುವುದು ಸಹಜ ವಿದ್ಯಮಾನವೇನೋ ಹೌದು. ಆದರೆ, ಮುಖವೇ ಇಲ್ಲದೆ, ಸಾಮಾಜಿಕ ಮಾಧ್ಯಮದ ಖಾತೆಗಳ ಮೂಲಕ ವಿಷ ಕಾರುವ ವಿಕೃತರು ಅಂತಹ ನಟ–ನಟಿಯರನ್ನೂ ವಿಪರೀತ ಕಾಡಿರುವ ಉದಾಹರಣೆಗಳು ಇವೆ.

2021ರಲ್ಲಿ ಹಿಂದಿ ಸಿನಿಮಾ ನಟ ಅಮೀರ್ ಖಾನ್ ಸಾಮಾಜಿಕ ಮಾಧ್ಯಮದ ಸಹವಾಸವೇ ಬೇಡ ಎಂದು ಹೊರಗೆ ಬಂದಿದ್ದರು. ಟ್ರೋಲ್‌ಗಳನ್ನು ಓದುತ್ತಾ ಹೋದಂತೆ ತಮ್ಮಲ್ಲಿ ನಕಾರಾತ್ಮಕ ಭಾವನೆ ಮೂಡುತ್ತಿದ್ದುದರಿಂದ, ಮಾಡಬೇಕಾದ ಕೆಲಸಗಳತ್ತ ಗಮನಹರಿಸಲು ಸಾಧ್ಯವಾಗಲಿಲ್ಲ ಎಂದು ಹಾಗೆ ಮಾಡಿದ್ದಾಗಿ ಹೇಳಿಕೊಂಡಿದ್ದರು. ಅದಕ್ಕೂ ಒಂದು ವರ್ಷ ಮುಂಚಿತವಾಗಿ ನಟಿ ಸೋನಾಕ್ಷಿ ಸಿನ್ಹ ಅವರು **‘#ab bas against cyber abuse’** (ಸೈಬರ್ ದೌರ್ಜನ್ಯ ಇನ್ನು ನಿಲ್ಲಲಿ ಎಂದು ಅದರ ವಿರುದ್ಧ ಅಭಿಯಾನ) ಎಂಬ ಆಂದೋಲನವನ್ನು ಸಾಮಾಜಿಕ ಮಾಧ್ಯಮದಲ್ಲಿಯೇ ಸಣ್ಣಮಟ್ಟದಲ್ಲಿ ಮಾಡಿದ್ದರು. ತಮ್ಮ ಟ್ವಿಟ್ಟರ್ ಖಾತೆಯನ್ನು ಅವರು ಅನಿವಾರ್ಯವಾಗಿ ಬದಲಿಸಿದ್ದ ಸಂದರ್ಭ ಅದು. ತಮ್ಮನ್ನು ಗೋಳು ಹೊಯ್ದುಕೊಳ್ಳುತ್ತಿದ್ದ ಟ್ರೋಲರ್‌ಗಳ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಅವರು ಸಾಮಾಜಿಕ ಮಾಧ್ಯಮದಲ್ಲಿಯೇ ಮನವಿ ಮಾಡಿದ್ದರು. ಫಾತಿಮಾ ಸನಾ ಶೇಖ್, ಸ್ವರಾ ಭಾಸ್ಕರ್ ಇವರೆಲ್ಲರೂ ಟ್ರೋಲರ್‌ಗಳ ಬಗ್ಗೆ ಮುಕ್ತವಾಗಿ ದನಿಯೆತ್ತಿದ್ದವರು.

ಇದು ಕೇವಲ ಸಿನಿಮಾ ತಾರೆಯರಿಗೆ ಸೀಮಿತವಾದ ಸಂಗತಿಯಾಗಿಲ್ಲ. ಹೆಣ್ಣುಮಕ್ಕಳ ವಿಷಯದಲ್ಲಿ ಟ್ರೋಲರ್‌ಗಳು ಹದ್ದು ಮೀರುವುದು ಸಾಮಾಜಿಕ ಮಾಧ್ಯಮದಲ್ಲಿ ವ್ಯಾಪಕವಾಗುತ್ತಿದೆ. ಅಂತಹ ಪ್ರಕರಣಗಳಲ್ಲಿ ಪೊಲೀಸ್ ಇಲಾಖೆಯು ಸ್ವಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡು ಪಾಠ ಕಲಿಸುವ ಜರೂರು ಇದೆ. ಇನ್ನು ಮುಂದೆ ಸಾಮಾಜಿಕ ಮಾಧ್ಯಮದಲ್ಲಿ ವಿಷಕಾರುವ ಮೊದಲು ಹಿಂದೆ–ಮುಂದೆ ಯೋಚಿಸಬೇಕಾದ ಪರಿಸ್ಥಿತಿ ಸೃಷ್ಟಿಯಾಗಬೇಕು. ಹಲವು ವಿಕೃತ ಮನಸ್ಸುಗಳಿಗೆ ಶಾಸ್ತಿಯಾದಲ್ಲಿ ಅದು ಸಾಕಾರಗೊಳ್ಳುವ ಸಾಧ್ಯತೆಯೂ ಇದೆ. ಹೀಗಾಗಿ ರಮ್ಯಾ ನೀಡಿರುವ ದೂರು ಈ ಸಂದರ್ಭದಲ್ಲಿ ತೂಕವುಳ್ಳದ್ದಾಗಿದೆ.

■ **ವಿಶಾಖ ಎನ್.**

